# ಕಾನೂರಿನ ಟೈಗರ್
## ವರ್ತಮಾನದ ಬದುಕಿನ ಸಹವರ್ತಿ



**ಶೃತಿ ಚೆಲ್ಲಾಳ್ ಆರ್.**
ಕಲೆ: ಮುರಳೀಧರ್ ರಾಥೋಡ್

ಪ್ರಸ್ತುತ ದಿನಗಳಲ್ಲಿ ಪ್ರಾಣಿ ಸಾಕಾಣಿಕೆಯು ಪ್ರತಿಷ್ಠೆಯ ಸಂಕೇತವಾಗಿದೆ. ಅದರಲ್ಲೂ ನಾಯಿಗಳನ್ನು ಲಕ್ಷಾನುಗಟ್ಟಲೇ ಹಣ ನೀಡಿ ಕೊಂಡುಕೊಂಡು ಮನೆಯ ಸದಸ್ಯನಿಗಿಂತ ಹೆಚ್ಚಿನ ಪ್ರೀತಿಯಿಂದ ಸಾಕುತ್ತಾರೆ. ಇಂತಹ ಸನ್ನಿವೇಶಗಳ ಮಧ್ಯದಲ್ಲಿ ನನ್ನ ಓದಿನ ಭಾಗವಾಗಿ ಬರುವ ಕುವೆಂಪು ಅವರ ಕಾದಂಬರಿ 'ಕಾನೂರು ಹೆಗ್ಗಡಿತಿ'ಯಲ್ಲಿನ 'ಟೈಗರ್' ಎಂಬ ನಾಯಿ ನನಗೆ ಅತೀ ಪ್ರೀತಿಯ ಮತ್ತು ಭಾವನಾತ್ಮಕವಾಗಿ ಹತ್ತಿರವಾಗಿ ನಿಲ್ಲುವ ಪ್ರಾಣಿ.

ಕುವೆಂಪು ತಮ್ಮ ಕಾದಂಬರಿಗಳಲ್ಲಿ ಬೇಟೆಯ ಕಾರಣದಿಂದಲೋ ಇಲ್ಲ, ನಾಯಿಯ ಮೇಲಿನ ಪ್ರೀತಿಯಿಂದಲೋ ಮಲೆನಾಡ ಪರಿಸರದಲ್ಲಿ 'ಟೈಗರ್' ನಾಯಿ ಪಾತ್ರವನ್ನು ತುಂಬಾ ಆತ್ಮೀಯವಾಗಿ ಚಿತ್ರಿಸಿದ್ದಾರೆ. ಅದಕ್ಕೆ ಕಾರಣ ಅಲ್ಲಿಯ ಪ್ರಕೃತಿಯ ಪ್ರೇರಣೆಯಾಗುತ್ತದೆ. ಅಲ್ಲಿನ ಜೀವನ ಶೈಲಿ, ಪ್ರಕೃತಿಯ ವಿಸ್ಮಯಗಳು ವೈವಿಧ್ಯಮಯ. ಅಲ್ಲಿ ಕಾಡು ಪ್ರಾಣಿಗಳ ಬೇಟೆಗಾಗಿ 'ಟೈಗರ್'ನಂತಹ ನಾಯಿಗಳು ಮುಖ್ಯವಾಗುತ್ತವೆ.

ಮನುಷ್ಯ ನಂಬಿಕೆಗಾಗಿಯೋ, ರಕ್ಷಣೆಗಾಗಿಯೋ, ಬೇಟೆಗಾಗಿಯೋ ನಾಯಿಯನ್ನು ಹತ್ತಿರದ ಬಂಧುವಾಗಿಸಿಕೊಂಡು ಅದರೊಂದಿಗೆ ನಿಕಟ ಸಂಪರ್ಕವಿರಿಸಿಕೊಂಡಿದ್ದಾನೆ. ಈ ರೀತಿಯ ಸಂಪರ್ಕದಿಂದಲೇ ನಾಯಿ ಅಂದಿನಿಂದ ಇಂದಿನವರೆಗೂ ಮನುಷ್ಯನ ಪ್ರೀತಿಯ ಪ್ರಾಣಿಯಾಗಿಯೇ ಉಳಿದುಕೊಂಡಿದೆ. ಕುವೆಂಪು ಸೃಷ್ಟಿಸುವ ಶ್ವಾನ ಪ್ರಪಂಚದಲ್ಲಿ ಟೈಗರ್ ನಗರ ಪರಿಸರದಿಂದ ಬಂದು ಮಲೆನಾಡ ಪರಿಸರದ ಭಾಗವಾಗುವ ಪರಿಯಲ್ಲಿ ಪುಟ್ಟಣ್ಣನ ಪರಿಶ್ರಮ ಹೆಚ್ಚಿದೆ. ದಟ್ಟಾರಣ್ಯದ ನಡುವಿನ ಅವರ ಜೀವನಕ್ಕೆ ಸಹಾಯಕವಾಗಿ ಅವರ ದೈನಂದಿನ ವ್ಯವಹಾರದಲ್ಲಿ ಒಂದಾಗುವ 'ಟೈಗರ್', ಬೇಟೆಯಲ್ಲಿ ತೋರುವ ಚಾಣಾಕ್ಷತೆಯು ಪುಟ್ಟಣ್ಣನಿಗೆ ತುಂಬಾ ಇಷ್ಟ. ಹಾಗಾಗಿಯೇ ಟೈಗರ್‌ನನ್ನು ಕಂಡರೆ ಪುಟ್ಟಣ್ಣನಿಗೆ ಎಲ್ಲಿಲ್ಲದ ಪ್ರೀತಿ.

ನಾಯಿ ಎಂಬ ಪ್ರಾಣಿಯು ಮಲೆನಾಡಿನವರಿಗೆ ಅವರ ಬದುಕಿನ ಭಾಗವಾಗಿಯೇ ಕಂಡುಬರುತ್ತದೆ. ಕಾಡಿನಲ್ಲಿ ಓಡಾಡಲು ಜೊತೆಗೆ ನಾಯಿ ಬೇಕು, ಬೇಟೆಯ ಅಂದಾಜು ಪತ್ತೆ ಮಾಡಲು, ಬೆಳೆದ ಬೆಳೆಯನ್ನು ಹಕ್ಕಿಪಕ್ಕಿ, ಕಾಡುಪ್ರಾಣಿಗಳಿಂದ ಕಾಪಾಡಿಕೊಳ್ಳಲು... ಹೀಗೆ ನಾಯಿಯ ಸಾಂಗತ್ಯವು ಬದುಕಿನಲ್ಲಿ ಸೇರಿಕೊಂಡಿರುತ್ತದೆ. ಬದುಕಿನಲ್ಲಿ ಅಷ್ಟೆಲ್ಲ ಜೊತೆಯಾಗಿ ನಿಲ್ಲುವ ನಾಯಿ ಟೈಗರ್ ಅನ್ನು ಹಚ್ಚಿಕೊಳ್ಳದೇ ಇರುವುದಾದರೂ ಹೇಗೆ. ಹೀಗೇ ಪುಟ್ಟಣ್ಣಯ್ಯನ ಪ್ರೀತಿಯ ಜೊತೆಗಾರನಾಗಿ ಟೈಗರ್ ಅವನ ಹಿಂದೆ ಮುಂದೆಯೇ ಸುಳಿದಾಡುತ್ತಾ ಆಪ್ತವಾಗಿದೆ. ಓದುಗರ ಮನಸ್ಸಿನಲ್ಲಿಯೂ ಟೈಗರ್‌ನ ಚಿತ್ರವು ಛಾಪೊತ್ತುವಂತೆ ಕುವೆಂಪು ಅವರು ಚಿತ್ರಿಸಿದ್ದಾರೆ.

'ಟೈಗರ್' ನಾಯಿಯನ್ನು ಹೂವಯ್ಯ ಬೆಂಗಳೂರಿನಿಂದ ತಂದದ್ದು. ಪೇಟೆಯಲ್ಲಿ ಬೆಳೆದ